# ನೀವಿದ್ದಲ್ಲಿಯೇ ಶ್ರಾವಣ

## ಶ್ರೀ ಮುರುಘಾ ಶರಣರಿಂದ ಬೌದ್ಧಿಕ ಯಾನ ಕಾರ್ಯಕ್ರಮ

ಕಾಲ ನಮಗೆ ಚಿಂತನೆಗೆ ಪ್ರೇರಣೆ ನೀಡುತ್ತದೆ. ಆಧ್ಯಾತ್ಮ ಅಂದರೆ ಪರಮಜ್ಞಾನ. ಇದು ತತ್ತ್ವಜ್ಞಾನವನ್ನು ಬಿಟ್ಟು ಇರಲಿಕ್ಕೆ ಸಾಧ್ಯವಿಲ್ಲ. ತತ್ವಜ್ಞಾನದ ಮೂಲ ಆಧ್ಯಾತ್ಮ. ಆಧ್ಯಾತ್ಮ ಇರುವಲ್ಲಿ ಆದರ್ಶ ಇರುತ್ತದೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ನೀವಿದ್ದಲ್ಲಿಯೇ ಶ್ರಾವಣ ದರ್ಶನ, ಶಿಮುಶ ಇವರಿಂದ ಬೌದ್ಧಿಕಯಾನ, ಶ್ರಾವಣಮಾಸದ ಪ್ರಯುಕ್ತ ಇಂದು ಶ್ರೀಮಠದಲ್ಲಿ ಪ್ರಾರಂಭವಾದ ಆಧಾತ್ಮ ಮತ್ತು ಬುದ್ಧಿ+ಶುದ್ಧಿ=ಸಿದ್ಧಿ ವಿಷಯದ ಮೇಲೆ ಫೇಸ್‌ಬುಕ್ ಹಾಗು ಯುಟ್ಯೂಬ್‌ನಲ್ಲಿ ನೇರಪ್ರಸಾರದಲ್ಲಿ ಚಿಂತನೆ ನಡೆಸಿದ ಶ್ರೀಗಳು, ನಿರ್ಜೀವ ಜಗತ್ತಿನಲ್ಲಿ ಘರ್ಷಣೆ ಉಂಟಾಗುತ್ತದೆ. ಮಾನವ ಲೋಕದಲ್ಲಿ ಸಂಘರ್ಷವಾಗುತ್ತದೆ. ಮರ ಮರ ಮಥನದಿಂದ ಅಗ್ನಿ ಹುಟ್ಟಿ ಆ ಮರನೆಲ್ಲವ ಸುಡದಿಪ್ಪುದೆ. ಕೆಲವರು ಕಾಡಿಗೆ ಬೆಂಕಿ ಹಚ್ಚಿ ವಿಘ್ನ ಸಂತೋಷ ಕಾಣುತ್ತಾರೆ. ಮಹಾನುಭಾವರ ಸಂಗದಿಂದ ಜ್ಞಾನಾಗ್ನಿ ಹುಟ್ಟಿ ಎಂದು ಬಸವಣ್ಣನವರು ಹೇಳುತ್ತಾರೆ. ಮಾನವನ ಆಂತರ್ಯದಲ್ಲಿರುವ ದುರ್ಗುಣಗಳನ್ನು ದಹಿಸುವಂತಹ ಮಹಾನುಭಾವ ತೋರಿಸು ಎನ್ನುತ್ತಾರೆ ಬಸವಣ್ಣನವರು. ಆಧ್ಯಾತ್ಮದಲ್ಲಿ ಪರಮಾರ್ಥ ಪ್ರಕಾಶ ಇದೆ. ಅದು ನಮ್ಮ ಬದುಕಿನಲ್ಲಿ ಪ್ರವೇಶ ಆಗಬೇಕು. ವಿವೇಕದ ಪ್ರವೇಶ ಆಗಬೇಕು. ವಿವೇಕ, ಸುಜ್ಞಾನ ಎನ್ನುವ ಸೂರ್ಯ ಚಂದಿರರ ಉದಯವಾಗಬೇಕು. ಅಧ್ಯಾತ್ಮದಿಂದ ಬುದ್ಧಿ.

**ಸಂಕುಚಿತ ಬುದ್ಧಿ** : ಇದು ಸೀಮಿತವಾಗಿರುವ ಬುದ್ಧಿ. ಅದು ಕ್ಷಣಿಕವಾದುದು. ಅದಕ್ಕೆ ಭವಿಷ್ಯವಿಲ್ಲ. ಗ್ರಂಥಾಧ್ಯಯನ ಮಾಡಿಕೊಂಡ ನಾವುಗಳು ವಿಶಾಲಬುದ್ಧಿಯವರಾಗಬೇಕು. ಅನುಭವಮುಖಿ, ಅಧ್ಯಯನಮುಖಿಯಾಗಬೇಕು. ಬದುಕನ್ನು ಅವು ಪಳಗಿಸುತ್ತವೆ.

**ದುರ್ಬುದ್ಧಿ :** ಇದನ್ನು ಬದುಕಿನಿಂದ ಉಚ್ಚಾಟನೆ ಮಾಡಬೇಕು. ನಮ್ಮ ಬದುಕನ್ನು ನಾಶ ಮಾಡುತ್ತದೆ. ಇದು ಇರುವೆಡೆ ದುಃಖ ಇರುತ್ತದೆ. ಇದರ ವ್ಯಾಪ್ತಿ ಶಕ್ತಿ ಕಡಿಮೆ ಇರುತ್ತದೆ. ಮಹಾವೀರ, ಬುದ್ಧ, ತೀಂರ್ಥಕರರು, ಪೈಗಂಬರ್, ಏಸು, ಗಾಂಧೀಜಿ, ಪರಮಹಂಸ ಇವರು ದಾರ್ಶನಿಕರು. ಇವರಲ್ಲಿ ದುರ್ಬುದ್ಧಿ ಇರಲಿಲ್ಲ.

**ಸದ್ಬುದ್ಧಿ :** ಶರಣರ, ಗುರುಗಳ ಸಂಪತ್ತು ಎಂದರೆ ಸುಜ್ಞಾನ. ಇದು ಇರುವಲ್ಲಿ ಸ್ವಾತಂತ್ರ್ಯ ಇರುತ್ತದೆ. ಪರಿವರ್ತಕರು, ದಾರ್ಶನಿಕರು, ಸಂತರು, ಸುಜ್ಞಾನಿಗಳು, ಸ್ವಾತಂತ್ರ್ಯ ಇರುವ ಹತ್ತಿರ ಸಾಮ್ರಾಜ್ಯ ನಿರ್ಮಾಣವಾಗುತ್ತದೆ. ಅವರವರ ಶರೀರಕ್ಕೆ ಅವರವರೇ ಅಧಿಪತಿಗಳು.

ನಂತರದಲ್ಲಿ ಶುದ್ಧಿ. ನಮ್ಮದು ಅನುಭವ ಮಾರ್ಗ. ತತ್ತ್ವಜ್ಞಾನದ ಜೊತೆ ಆದರ್ಶವು ಇರಬೇಕು. ಶಾರೀರಿಕವಾಗಿರುವ ಶುದ್ಧಿಗೆ ಒಳಗಾಗಬೇಕು. ಇಂದ್ರಿಯಗಳ ಶುದ್ಧಿಯನ್ನು ಮಾಡಿಕೊಳ್ಳಬೇಕು. ಇದರ ಜೊತೆ ಅಂತರಂಗ ಶುದ್ಧಿ ಬೇಕು. ಶುದ್ಧೀಕರಣ ಇರುವಲ್ಲಿ ಉನ್ನತೀಕರಣ ಇರುತ್ತದೆ. ಶರೀರದ ಮೇಲೆ ಇಂದ್ರಿಯಗಳ ಮೇಲೆ ಬುದ್ಧಿಯ ಮೇಲೆ ನಿಯಂತ್ರಣ ಸಾಧಿಸಬೇಕು. ಸಿದ್ಧಿ ಎಂದರೆ ಪರಿಪೂರ್ಣತೆ ಪರಮ ಪ್ರಕಾಶದತ್ತ ನಮ್ಮನ್ನು ಕರೆದುಕೊಂದು ಹೋಗುತ್ತದೆ. ಭಾರತೀಯ ಶಾಸ್ತ್ರದಲ್ಲಿ ಅಷ್ಟ ಸಿದ್ಧಿಗಳು ಇವೆ. ಒಬ್ಬ ಯೋಗಿಯ ಮುಂದೆ ಅಷ್ಟ ಸಿದ್ಧಿಗಳು. ಅಷ್ಟು ಪರಿಪೂರ್ಣ ಅನ್ನಿಸುವುದಿಲ್ಲ.

ಜೀವನ ಸಿದ್ಧಿ ಮುಖ್ಯವಾದುದು. ಬುದ್ಧಿಯ ಸಿದ್ಧಿ, ಸಾಧನೆಯ ಸಿದ್ಧಿ ಪ್ರಭುತ್ವದ ಜೊತೆ ಸಾಗುತ್ತದೆ. ಅದು ಪರಿಪೂರ್ಣತೆ. ಅಷ್ಟ ಸಿದ್ಧಿಗೆ ಬದಲಾಗಿ ಪಂಚ ಪರುಷಗಳು ಇವೆ. ಯಾರು ಅಂತರಂಗದಲ್ಲಿ ಬಹಿರಂಗದಲ್ಲಿ ದಿವ್ಯಜ್ಞಾನವನ್ನು ಹೊಂದಿರುತ್ತಾರೋ ಅಂತಹವರ ನಯನ ಪರುಷ. ಅಲ್ಲಮ, ಎಡೆಯೂರು ಶ್ರೀಗಳಿಗೆ ಅಂತಹ ಸಿದ್ಧಿಯಾಗಿತ್ತು. ನಯನ ಪರುಷ ನಂತರ ಹಸ್ತ ಪರುಷ, ವಾಕ್ ಪರುಷ, ನುಡಿದುದೆಲ್ಲವು ಸತ್ಯವಾಗುವುದು. ನಡೆಪರುಷ, ಪಾದಪರುಷ, ಇವುಗಳಿಂದ ಕಲ್ಯಾಣವಾಗುತ್ತದೆ. ಇದನ್ನು ಶಿವಯೋಗ ಧ್ಯಾನದಿಂದ ಪಡೆಯಬಹುದು. ಸತ್ಪುರುಷರು ಯಾರೋ ಅವರು ಸಿದ್ಧ ಪುರುಷರು ಎಂದರು.

ಈ ಸಂದರ್ಭದಲ್ಲಿ ಅಥಣಿಯ ಶ್ರೀ ಶಿವಬಸವ ಸ್ವಾಮಿಗಳು, ಶಿರ್ಸಿಯ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು, ಶ್ರೀ ಬಸವಕಿರಣ ಸ್ವಾಮಿಗಳು, ಸಾಧಕರು, ಎಸ್‌ಜೆಎಂ ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ, ಕಾರ್ಯನಿರ್ವಹಣಾಧಿಕಾರಿ ಎಂ.ಜಿ.ದೊರೆಸ್ವಾಮಿ, ಆರ್.ಲಿಂಗರಾಜು ಮೊದಲಾದವರಿದ್ದರು. ರವಿ ಯಡಹಳ್ಳಿ ಸ್ವಾಗತಿಸಿದರು. ಜಮುರಾ ಕಲಾವಿದರು ಪ್ರಾರ್ಥಿಸಿದರು.

